# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಕರು ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **575** |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | **20-02-2024** |

*****

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಉತ್ತರ ಕರ್ನಾಟಕದ ಬೆಳಗಾವಿ ಮತ್ತು ಅವಿಭಾಜ್ಯ ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಇರುವ ಕೈಮಗ್ಗಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ಉತ್ತರ ಕರ್ನಾಟಕದ ಬೆಳಗಾವಿ ಮತ್ತು ಅವಿಭಾಜ್ಯ ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಒಟ್ಟು 4990 ಕೈಮಗ್ಗಗಳು ಇವೆ.<br>ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರಸಂ</th><th>ಜಿಲ್ಲೆಯ ಹೆಸರು</th><th>ಕೈಮಗ್ಗಗಳ ಸಂಖ್ಯೆ</th></tr>
<tr><td>1</td><td>ಬೆಳಗಾವಿ</td><td>1341</td></tr>
<tr><td>2</td><td>ಧಾರವಾಡ</td><td>368</td></tr>
<tr><td>3</td><td>ಗದಗ</td><td>1431</td></tr>
<tr><td>4</td><td>ಹಾವೇರಿ</td><td>1850</td></tr>
<tr><td></td><td>ಒಟ್ಟು</td><td>4990</td></tr>
</table></td></tr>
<tr><td>ಆ)</td><td>ಕೈಮಗ್ಗ ಉದ್ಯೋಗಿಗಳು ಎದುರಿಸುತ್ತಿರುವ ಕಚ್ಚಾ ವಸ್ತು, ಮಾರುಕಟ್ಟೆ ಹಣಕಾಸು ಮುಂತಾದ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ;</td><td>ಕೈಮಗ್ಗ ಉದ್ಯೋಗಿಗಳು ಎದುರಿಸುತ್ತಿರುವ ಕಚ್ಚಾ ವಸ್ತು, ಮಾರುಕಟ್ಟೆ ಹಣಕಾಸು ಮುಂತಾದ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆ.</td></tr>
<tr><td>ಇ)</td><td>ಇವರುಗಳು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ಇವರುಗಳು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
<ul>
<li>ನೇಕಾರರ ಸಮ್ಮಾನ್ ಯೋಜನೆ</li>
<li>ಸಹಕಾರ ಬ್ಯಾಂಕ್‌ಗಳು ನೀಡಿದ ಶೂನ್ಯ. 1% ಮತ್ತು 3% ಸಾಲದ ಮೇಲೆ ಬಡ್ಡಿ ಸಹಾಯಧನ ಹಾಗೂ ಶೇ.8 ರ ಬಡ್ಡಿ ಸಹಾಯಧನ</li>
<li>ನಬಾರ್ಡ್ ಪುನರ್ಧನ ಯೋಜನೆಯಡಿ ಬಡ್ಡಿ ಸಹಾಯಧನ</li>
<li>ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿಗೆ ರೂ.15/-ರ ಸಹಾಯಧನ ನೀಡುವುದು.</li>
<li>ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ವರ್ಷ ಪೂರ್ತಿ ಶೇ.20 ರಿಬೇಟ್ ಯೋಜನೆ</li>
<li>ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣ</li>
</ul></td></tr>
</table>

| | | |
|---|---|---|
| | | • ಕೈಮಗ್ಗ ವಿಕಾಸ ಯೋಜನೆ<br>• ಮಿತವ್ಯಯ ನಿಧಿ ಯೋಜನೆ<br>• ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹಧನ<br>• ಕೈಮಗ್ಗ ನೇಕಾರರಿಗೆ ದುಡಿಮೆ ಬಂಡವಾಳಕ್ಕಾಗಿ ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಸಹಾಯಧನ ಹಾಗೂ ರಿಯಾತಿಯಿ ಬಡ್ಡಿ ದರದಲ್ಲಿ ಸಾಲ ವಿತರಣೆ. ರಾಷ್ಟ್ರೀಯ ಕೈಮಗ್ಗ ಮೇಳ (NHE), ರಾಜ್ಯಮಟ್ಟದ ಕೈಮಗ್ಗ ಮೇಳ (SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳಗಳ (DHE) ಆಯೋಜಿಸಿ ಕೈಮಗ್ಗ ಉತ್ಪನ್ನಗಳ ಮಾರಾಟ ಮೇಳ ಆಯೋಜಿಸಲಾಗುತ್ತಿದೆ. |
| ಈ) | ಉದ್ಯೋಗಿಗಳು ಕೈಮಗ್ಗಗಳನ್ನು ಮುಚ್ಚು ತ್ತಿರುವುದರಿಂದ ಸಾಂಪ್ರದಾಯಿಕ ಸೀರೆಗಳ ಉತ್ಪಾದನೆ ಕಡಿಮೆಯಾಗುತ್ತಿದ್ದು ಅದಕ್ಕೆ ಪರಿಹಾರ ನೀಡಲಾಗುವುದೇ? | • ಇಳಕಲ್ ಸೀರೆ, ಗುಳೇದಗುಡ್ಡಖಣ, ಮೊಳಕಾಲ್ಮೂರು ರೇಷ್ಮೆ ಸೀರೆ ಮತ್ತು ಉಡುಪಿಯ ಕಾಟನ್ ಸೀರೆ ಈ 4 ಉತ್ಪನ್ನಗಳನ್ನು ಜಿಯೋಗ್ರಾಫೀಕಲ್ ಇಂಡಿಕೇಷನ್ (GI) ಕಾಯ್ದೆಯಡಿ ನೊಂದಾಯಿಸಲಾಗಿದ್ದು, ಈ ಎಲ್ಲಾ ಉತ್ಪನ್ನಗಳು ಪಾರಂಪರಿಕವಾಗಿ ಆಯಾ ಪ್ರದೇಶಗಳಲ್ಲಿ ಉತ್ಪಾದಿಸಲಾಗುತ್ತಿದೆ.<br>• ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ಮುಖಾಂತರ ಕೈಮಗ್ಗ ಸಹಕಾರ ಸಂಘಗಳು ಖರೀದಿಸುವ ಕಚ್ಚಾ ನೂಲಿಗೆ ಪ್ರತಿ ಕೆ.ಜಿಗೆ ರೂ.15/- ರ ಸಹಾಯಧನ ನೀಡಲಾಗುವುದು.<br>• ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಗ್ರಾಹಕರಿಗೆ ನೀಡುವ ಶೇಕಡ 20 ರಿಬೇಟ್ ಅನ್ನು ರಾಜ್ಯ ಸರ್ಕಾರ ವತಿಯಿಂದ ಮರುಪಾವತಿಸಲಾಗುತ್ತಿದೆ.<br>• ನೇಕಾರರ ಸಹಕಾರ ಸಂಘಗಳು / ಸಹಕಾರ ಬ್ಯಾಂಕ್ ಗಳಿಂದ ನೇಕಾರರಿಗೆ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ಶೂನ್ಯ / ಶೇ.1ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ಹಾಗೂ ಶೇ.3ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ನೀಡುವ ಸಾಲಕ್ಕೆ ಬಡ್ಡಿ ಸಹಾಯಧನ ನೀಡಲಾಗುತ್ತಿದೆ.<br>• ನೇಕಾರರ ಸಹಕಾರ ಸಂಘಗಳು / ಸಹಕಾರ / ವಾಣಿಜ್ಯ ಬ್ಯಾಂಕ್‌ಗಳಿಂದ ನೇಕಾರರು ಪಡೆಯುವ ಸಾಲದ ಮೇಲೆ ಶೇ.8ರಷ್ಟು ಬಡ್ಡಿ ಸಹಾಯಧನವನ್ನು ಮರುಸಂದಾಯ ಮಾಡಲಾಗುವುದು. |

**ಸಂಖ್ಯೆ:CI 30 JAKE 2024**

(ಶಿವಾನಂದ ಎಸ್. ಪಾಟೀಲ)